KARN010004902026

M H ANNAYYANAVAR

Digitally signed by M H ANNAYYANAVAR
Date: 2026.03.23 17:30:36 +0530

| | | |
|---|---|---|
| Presented on | : | 03-03-2026 |
| Registered on | : | 04-03-2026 |
| Decided on | : | 23-03-2026 |
| Duration | : | 19 days |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್.ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 23 ನೇ ಮಾರ್ಚ್ ಮಾಹೆ 2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 157/2026**

ಅರ್ಜಿದಾರರು : ಆರೋಪಿ

ಶ್ರೀ ಶ್ಯಾಮು.ಹೆಚ್.ಎಂ.,
ಬಿನ್ ಮಂಜುನಾಥ,
ವಯಸ್ಸು ಸುಮಾರು 36 ವರ್ಷ.
ವಾಸಃ ಹುಲುವೇನಹಳ್ಳಿ ಗ್ರಾಮ,
ಮಡಬಾಳ್ ಹೋಬಳಿ,
ಬೆಂಗಳೂರು ದಕ್ಷಿಣ ಜಿಲ್ಲೆ.

(ಪರವಾಗಿ ಶ್ರೀ ರಂಗಸ್ವಾಮಿ.ಜಿ., ವಕೀಲರು)

-ವಿರುದ್ಧ -

ಎದುರುದಾರರು:

ಸರ್ಕಾರದ ಪರವಾಗಿ ಅಬಕಾರಿ ಪೊಲೀಸ್ ಠಾಣೆ,
ಮಾಗಡಿ ವಲಯ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **482** ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ಅಬಕಾರಿ ನಿರೀಕ್ಷಕರು, ಮಾಗಡಿ ವಲಯದವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## <u>ಕಾರಣಗಳು</u>

5. <u>ಅಂಶ ಸಂಖ್ಯೆ **1:**</u> ಪಿರ್ಯಾದಿದಾರರು ಕೊಟ್ಟ ದೂರಿನಂತೆ ಅಬಕಾರಿ ಪೊಲೀಸ್ ಠಾಣೆ, ಮಾಗಡಿ ವಲಯ ಅಧಿಕಾರಿಗಳು ಅರ್ಜಿದಾರರ ವಿರುದ್ಧ ಅಬಕಾರಿ ಪೊಲೀಸ್ ಠಾಣೆ ಮಾಗಡಿ ವಲಯ ಅಪರಾಧ ಸಂಖ್ಯೆ 82/2025-26 ಅಬಕಾರಿ ಕಾನೂನು ಕಲಂ.14, 15, 32(1) ಮತ್ತು 38(ಎ) ರ ಅಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ.

6. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ**:**</u> ದೂರನ್ನು ಪರಿಶೀಲಿಸಲಾಗಿ, ಮಾಗಡಿ ತಾಲ್ಲೂಕು, ಮಾಡಬಾಳ್ ಹೋಬಳಿ, ಹುಲುವೇನಹಳ್ಳಿ ಗ್ರಾಮದಲ್ಲಿ ಅಬಕಾರಿ ನಿರೀಕ್ಷಕರು, ಸಿಬ್ಬಂಧಿಯೊಂದಿಗೆ ಗಸ್ತು ನಡೆಸುತ್ತಿದ್ದಾಗ ಅರ್ಜಿದಾರ ಆರೋಪಿಯವರಿಗೆ ಸೇರಿದ ಮಾರುತಿ ಹೋಟೆಲ್‌ನಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಮಾಹಿತಿ ಮೇರೆಗೆ ಸಿಬ್ಬಂದಿಯೆಂದಿಗೆ ಸ್ಥಳಕ್ಕೆ ಹೋಗಿ

ಪಂಚರ ಸಮಕ್ಷರ ಆರೋಪಿಯ ಹೋಟೆಲ್ ಮೇಲೆ ದಾಳಿ ನಡೆಸಿ ಶೋಧನೆ ಮಾಡಲಾಗಿ ನೋಡಿದಾಗ ಆರೋಪಿಯು ಅಕ್ರಮವಾಗಿ ವಿವಿಧ ಬ್ರಾಂಡ್‌ಗಳ ಒಟ್ಟು ಪ್ರಮಾಣ 4.410 ಲೀಟರ್ ಮದ್ಯವನ್ನು ದಾಸ್ತಾನು ಮಾಡಿಕೊಂಡಿರುವುದು ಪತ್ತೆಯಾಗಿದ್ದು, ಸದರಿಯವರು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಮಾಡಿಕೊಂಡಿರುತ್ತಾರೆ. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವವಾಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ಕೇಸ್ ಡೈರಿ ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ಸ್ಥಳ ಮಹಜರ್, ಅಮಾನತ್ತು ಮಹಜರ್ ಆಗಿ ಮದ್ಯದ ಬಾಟಲುಗಳನ್ನು ಅಮಾನತ್ತುಪಡಿಸಿಕೊಂಡಿರುವುದರಿಂದ ಅರ್ಜಿದಾರ ಮುಂದುವರೆದ ತನಿಖೆಗೆ ಅವಶ್ಯಕತೆ ಇರುವುದಿಲ್ಲ. ಅರ್ಜಿದಾರರಿಗೆ ಎದುರುದಾರ ಪೊಲೀಸರು ನೋಟೀಸ್ ಕೊಟ್ಟಿರುವುದರಿಂದ ಇಂತಹ ಸಂದರ್ಭದಲ್ಲಿ ಅರ್ಜಿದಾರ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

9. ಅರ್ಜಿದಾರರು ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆ ಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ

ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತ ನ್ಯಾಯಾಲಯಕ್ಕೆ ಕಂಡು ಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

10. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರರಿಂದ ರೂ.50,000/- **(**ಐವತ್ತು ಸಾವಿರ ರೂಪಾಯಿ**)** ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

### <u>ಷರತ್ತುಗಳು</u>

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.

4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.

5. ಅರ್ಜಿದಾರರು ಎದುರುದಾರ ಪೊಲೀಸ್ ಠಾಣೆಯಲ್ಲಿ ಪ್ರತಿ ಸೋಮವಾಗ ಮಧ್ಯಾಹ್ನ 2 ರಿಂದ 5 ಗಂಟೆ ಒಳಗೆ ಒಂದು ತಿಂಗಳು ಹಾಜರಾತಿ ನೀಡತಕ್ಕದ್ದು.

6. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ -1 ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ 23 ನೇ ಮಾರ್ಚ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.